# ನೀವು ಕೇಳಿದಿರಿ?

ಬಿ.ಎಚ್.ಮಾನಗೆ, ಹೊನ್ನಾವರ
*ಪ್ರೇಮಿಗಳಿಗೆ ಪಾಲಕರ ಪ್ರೀತಿಗಿಂತ ತಮ್ಮ ಪ್ರೀತಿಯೇ ದೊಡ್ಡದೇಕೆ?*
ಕಾವಿರುವ ಪ್ರೀತಿಯ ಮುಂದೆ ಕಾಳಜಿಯ ಪ್ರೀತಿ ಕುಬ್ಜ!

ಮಹೇಶ್ ಹೆಗಡೆ, ಹೆಗ್ಗೆ
*ಸಚಿವ ಸ್ಥಾನಕ್ಕೆ ಪ್ರವೇಶ ಪರೀಕ್ಷೆ ಕಡ್ಡಾಯ ಎಂದು ರೂಲ್ಸ್ ಮಾಡಿದರೆ ಏನಾಗುತ್ತದೆ?*
ಪುಸ್ತಕ ನೋಡಿಕೊಂಡು ಕಾಪಿ ಮಾಡಲು ಅವಕಾಶ ನೀಡುವ ಇನ್ವಿಜಿಲೇಟರ್‌ಗಳಿಗೆ ಡಿಮ್ಯಾಂಡ್ ಹೆಚ್ಚುತ್ತದೆ!

ಸುನೀಲ್ ಎಂ.ಜಿ, ಬೈಂದೂರು
*ಮಾಧ್ಯಮ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಲು ಸುಲಭ ಉಪಾಯ ಯಾವುದು?*
ಹೆಸರಿನ ಫಾಂಟ್ (ಅಕ್ಷರದ ಅಳತೆ) ಜಾಸ್ತಿ ಮಾಡಿದರಾಯ್ತು!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
*ಪ್ರೀತಿ ಮಾಡುವಾಗ ಹಾಲು ಇದ್ದಂತೆ, ಮದುವೆ ಆದ ಮೇಲೆ ಹಾರ್ಲಿಕ್ಸ್ ಇದ್ದಂತೆ; ಸಂಸಾರ ಮಾಡಿದಾಗ?*
(ದೂರ) ಹಾರ್ಲಿಕ್ ಸಿದ್ಧವಂತೆ!

ನಾರಾಯಣ, ಗುಗ್ಗರಹಟ್ಟಿ
*ಪ್ರತಿವರ್ಷ ಎವರೆಸ್ಟ್ ನೆತ್ತಿಯ ಮೇಲೆ ಎಷ್ಟೋ ಜನ ಕಾಲಿಡುತ್ತಾರೆ. ಆದರೆ ತೇನ್‌ಸಿಂಗ್, ಹಿಲೇರಿಯಷ್ಟು ಪ್ರಖ್ಯಾತಿ ಯಾರಿಗೂ ಬರಲಿಲ್ಲವಲ್ಲಾ...?*
ಖ್ಯಾತಿ ಆದಿಪುರುಷರಿಗೆ ಮೀಸಲು, ಹಾದಿ ಪುರುಷರಿಗಲ್ಲ!

ರಮೇಶ್, ಹನುಮನಾಳು
*ಬದುಕಿರುವಾಗ ಊರಿನ ಬಗ್ಗೆ ಅಭಿಮಾನ ಇಲ್ಲದವರನ್ನು ಸತ್ತಾಗ ಊರಿಗೆ ತರುವುದೇಕೆ?*
ಸತ್ತರೂ ಊರಿಗೆ ಬರಲ್ಲ ಎಂಬ ಅವನ ಹೇಳಿಕೆಯನ್ನು ಸುಳ್ಳು ಮಾಡಲು!

ಡಿ.ಎಲ್.ನಾಗರಾಜ್, ಹರಪನಹಳ್ಳಿ
*ಸಲಿಂಗಕಾಮ ಆರೋಗ್ಯಕರವೇ?*



ಆರೋಗ್ಯಕರ ಮನಸ್ಸಿನವರು ಅದರತ್ತ ಹೋಗರು. ಈ ವಿಚಾರದಲ್ಲಿ ಪ್ರಾಣಿಗಳೇ ಗುಣದಲಿ ಮೇಲು!

ಎಸ್.ಲಕ್ಷ್ಮೀನರಸಿಂಹ,ಚಾಮರಾಜನಗರ
*ಕಾವೇರಿ ಸಮಸ್ಯೆಗೆ ಪರಿಹಾರ ಹೇಗೆ?*



ಕಾವಿಲ್ಲದ ಚರ್ಚೆಯ ಮೂಲಕ!

ಅಕ್ಷಯ ಜೈನ್, ಹೂವಿನಹಡಗಲಿ
*ಅಗ್ನಿ ಚಕ್ರದಂತೆ ಪ್ರಶ್ನೆ ಎಸೆದರೂ ಅಮೃತದಂತೆ ಉತ್ತರಿಸುವ ಗುಟ್ಟೇನು ಸಾರ್?*
ಸವಾಲಿನ ಸಾಗರದಲ್ಲಿ ಚಿಂತನೆಯ ಮಂಥನವಾದರೆ ಉತ್ತರದ ಅಮೃತ ಅಕ್ಷಯ!

## ಬಹುಮಾನಿತ ಪ್ರಶ್ನೆ

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
*ನಾವು ಜೀವನದಲ್ಲಿ ಬಹು ಬೇಗನೆ ಹಾಗೂ ಸ್ವಲ್ಪ ನಿಧಾನವಾಗಿ ಮಾಡಬೇಕಾದ ಕೆಲಸಗಳು?*
ಬೇಗನೆ ಲಂಚ ತೆಗೆದುಕೊಳ್ಳಬೇಕು, ನಿಧಾನವಾಗಿ ಕೆಲಸ ಮಾಡಬೇಕು ಎಂದನೊಬ್ಬ ಸರ್ಕಾರಿ ನೌಕರ!

ವಿ.ಹೇಮಂತಕುಮಾರ್, ಬೆಂಗಳೂರು
*ಇಲ್ಲೊಬ್ಬ ವಿಧಾನಸೌಧದ ಮುಂದೆ ನಿಂತು ಮೇರಾ ಕರ್ನಾಟಕ್ ಮಹಾನ್ ಎನ್ನುತ್ತಿದ್ದಾನಲ್ಲಾ...?*
ಮೇರಾ–ನನ್ನ ಕರ್–ಕೈ (ಮಾಡುತ್ತಿರುವ) ನಾಟಕ್–ನಾಟಕ ಮಹಾನ್– ದೊಡ್ಡದು ಎಂದರ್ಥ. ಯಾರೋ ಕಾಂಗ್ರೆಸ್‌ನವನಿರಬೇಕು!

ಜಗದೀಶ ನೂಲಿನವರ, ವಿಜಾಪುರ
*ಬುದ್ಧಿವಂತರಾಗಿದ್ದರೂ ಚುರುಕು ಆಗದಿರುವವರು ಹೇಗೆ ಬದುಕಬೇಕು?*
ಇತರರಿಗೆ ಪಿ.ಎ. ಆಗಿ!

ದೀಪಾ ವಿ ಮಹಾಲೆ, ಸಾಂಬ್ರಾಣಿ
*ಸಿನೆಮಾ ನಟ ನಟಿಯರನ್ನು ನಕ್ಷತ್ರಗಳಿಗೆ ಹೋಲಿಸುವುದೇಕೆ?*
ನಕ್ಷತ್ರ ಅಂಬರದಲ್ಲಿ ಚಿಕ್ಕದಾಗಿ ಮತ್ತು ಇವರು ಚಿಕ್ಕ ಅಂಬರದಲ್ಲಿ ಮಿಂಚುವುದರಿಂದ!

ಬಸವರಾಜ ಹೊನಖಾಂಡೆ, ಅಥಣಿ
*ಭೂಮಿ ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕಿದರೆ, ಗಂಡು ಹೆಣ್ಣಿನ ಸುತ್ತ ಏಕೆ ಪ್ರದಕ್ಷಿಣೆ ಹಾಕುತ್ತಾನೆ?*
ಗಂಡು ಗ್ರಹವೇ, ಹತ್ತನೆಯ ಗ್ರಹ! ಗ್ರಹಗಳಿಗೆ ಹೊಳಪಿನ ಸುತ್ತ ಸುತ್ತುವುದು ಜನ್ಮಜಾತ ಕರ್ಮ!

ಎಂ.ಎಸ್. ಸುಕನ್ಯಾಬಾಯಿ, ಬಳ್ಳಾರಿ
*ವಿಧಾನಸೌಧಕ್ಕೂ, ಪಾರ್ಲಿಮೆಂಟ್‌ಗೂ ಎಷ್ಟು ದೂರವಿದೆ?*
ಒಂದು ಪ್ರೆಸಿಡೆಂಟ್ ರೂಲ್‌ನಷ್ಟು!

ದೇಶವಳ್ಳಿ ಶಿವು, ಚಾಮರಾಜನಗರ
*ಹೆಣ್ಣಿನ ಮನಸ್ಸನ್ನು ತಿಳಿಯಲು ಹೋಗಿ ತಿಳಿದವರೇ ಏಕೆ ಸೋತರು?*
ಸೋಲುವುದರಲ್ಲಿ ಇರುವ ಸುಖ ಕಂಡರಲ್ಲಾ...!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಬಳಗ ಬರಬೇಕಾದರೆ ಕಾಗೆ ಕೂಗಬೇಕು; ಬಳಗದವರು ಹೋಗಬೇಕಾದರೆ?*
ಅಡಿಗೆ ಕೆಡಿಸಬೇಕು!

ಎಚ್.ಆರ್.ಕಡಿವಾಲ, ಬಾದಾಮಿ
*ಎಲ್ಲಾ ಪರೀಕ್ಷೆಗಳಲ್ಲಿ ಹುಡುಗಿಯರೇ ಮೇಲುಗೈ ಸಾಧಿಸುತ್ತಾರೆ, ಏಕೆ?*
ಅವರು ಬರಿದೇ ಪಾಠ ಫಾಲೋ ಮಾಡಿದರೆ ಸಾಕು. ಹುಡುಗರು ಪಾಠವಷ್ಟೇ ಅಲ್ಲದೆ ಹುಡುಗಿಯರನ್ನೂ ಫಾಲೋ ಮಾಡಬೇಕಲ್ಲಾ...

ಶ್ರೀಮತಿ ಸುನಂದ, ಗೌರಿಬಿದನೂರು
*ಮುಖಾಮುಖಿ ಕುಳಿತು ಕಾಫಿ/ಟೀ ಕುಡಿಯುತ್ತಾ ನಮ್ಮ ಪ್ರಶ್ನೆಗಳಿಗೆ ಉತ್ತರಿಸಬಾರದೇಕೆ?*
ಹಾಗೂ ಆಗಬಹುದಿತ್ತು, ಆದರೆ..... ನನಗೆ ಕಾಫಿ/ಟೀ ಸೇರಲ್ಲ!

ಮಹಾವೀರ ಕಾಸರ, ಚನ್ನಗಿರಿ
*ಸ್ವಾಮೀಜಿಗಳ ಹೆಸರಿನ ಹಿಂದೆ ಶ್ರೀಕಾರಗಳು, ಅಂಕಿಗಳು ಏಕೆ?*




ಮಿಲ್ಟ್ರಿಯಲ್ಲಿ ಕೊಟ್ಟ ಸ್ಟಾರ್‌ಗಳಂತೆ ಅವು. ಅಂಕಿ, ಶ್ರೀಗಳು ಹೆಚ್ಚಿದಷ್ಟೂ ಅವರ ಗ್ರೇಡ್ ಹೆಚ್ಚು ಎಂಬುದು ಹುಂಬ ಭಕ್ತರ, ಸೋಗಿನ ಸ್ವಾಮಿಗಳ ಅಭಿಮತವಂತೆ!

■ ರಾಮ್